5

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ : ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ 2012-13ನೇ ಸಾಲಿಗೆ ಯೋಜನೇತರ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.**

\- - - - - -

**ಓದಲಾಗಿದೆ :-**

1. ಸರ್ಕಾರದ ಆದೇಶ ಸಂಖ್ಯೆ : ಕೃಇ 31 ಕೃವಿಧಾ 2012 ದಿನಾಂಕ : 24-05-2012.
2. ಸರ್ಕಾರದ ಆದೇಶ ಸಂಖ್ಯೆ : ಕೃಇ 31 ಕೃವಿಧಾ 2012 ದಿನಾಂಕ : 09-08-2012.
3. ಸರ್ಕಾರದ ಆದೇಶ ಸಂಖ್ಯೆ : ಕೃಇ 31 ಕೃವಿಧಾ 2012 ದಿನಾಂಕ : 05-11-2012.
4. ಸರ್ಕಾರದ ಆದೇಶ ಸಂಖ್ಯೆ : ಕೃಇ 31 ಕೃವಿಧಾ 2012, ದಿನಾಂಕ : 06-02-2013.
5. ಧಾರವಾಡ ಕೃಷಿ ವಿಶ್ವವಿದ್ಯಾಲಯದ ದಿನಾಂಕ : 05-03-2013ರ ಪತ್ರ ಸಂಖ್ಯೆ : ಕುಪ/ಹನಿ/____/2012-13.
6. ಆರ್ಥಿಕ ಇಲಾಖೆಯ ದಿನಾಂಕ : 20-03-2013ರ ಆದೇಶ ಸಂಖ್ಯೆ : ಎಫ್‌ಡಿ 327 ಬಿಆರ್‌ಎಸ್ 2012.

**ಪ್ರಸ್ತಾವನೆ :-**

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಯೋಜನೇತರ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು 2012-13ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2415-80-004-2-01-101 ಅಡಿಯಲ್ಲಿ ರೂ. 5300.00 ಲಕ್ಷಗಳನ್ನು ಹಂಚಿಕೆ ಮಾಡಿರುತ್ತದೆ. ಮೇಲೆ ಕ್ರಮವಾಗಿ ಓದಲಾದ (1), (2), (3) ಮತ್ತು (4)ರ ದಿನಾಂಕ : 24-05-2012, 09-08-2012, 05-11-2012 ಮತ್ತು 06-02-2013ರ ಸರ್ಕಾರಿ ಆದೇಶಗಳಂತೆ 4 ತ್ರೈಮಾಸಿನ ಅನುದಾನವಾಗಿ ತಲಾ ರೂ. 1325.00 ಲಕ್ಷಗಳಂತೆ ಒಟ್ಟು ರೂ. 5300.00 ಲಕ್ಷಗಳ ಪೂರ್ಣ ಯೋಜನೇತರ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

ಮೇಲೆ (5)ರಲ್ಲಿ ಓದಲಾದ ಧಾರವಾಡ ಕೃಷಿ ವಿಶ್ವವಿದ್ಯಾಲಯದ ದಿನಾಂಕ : 05-03-2013ರ ಪತ್ರದಲ್ಲಿ 2012-13ನೇ ಸಾಲಿಗೆ ರಾಜ್ಯ ಸರ್ಕಾರವು ವೇತನ, ಪಿಂಚಣಿ, ಅಂಶದಾನ ಮುಂತಾದ ಯೋಜನೇತರ ಉದ್ದೇಶಗಳಿಗೆ ಬಿಡುಗಡೆ ಮಾಡಲಾದ ಅನುದಾನವನ್ನು 2013ರ ಮಾರ್ಚ ಅಂತ್ಯದವರೆಗೆ ಸರಿದೂಗಿಸಿಕೊಳ್ಳಲು ಅನುದಾನದ ಕೊರತೆಯಾಗಿರುವುದರಿಂದ ರೂ. 2255.21 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾಪಿಸಿರುತ್ತಾರೆ.

ಮೇಲೆ (6)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ದಿನಾಂಕ : 20-03-2013ರ ಆದೇಶದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪ್ರಸ್ತಾವನೆಯನ್ನು ಪರಿಶೀಲಿಸಿ ಲೆಕ್ಕಶೀರ್ಷಿಕೆ 2401-00-110-0-09-106 (ಯೋಜನೆ) ಅಡಿಯಲ್ಲಿ ಉಳಿತಾಯವಾದ ಅನುದಾನ ರೂ. 1200.00 ಲಕ್ಷಗಳನ್ನು ಕೃಷಿ ಶಿಕ್ಷಣ ಹಾಗೂ ಕೃಷಿ ಸಂಶೋಧನಾ ಲೆಕ್ಕಶೀರ್ಷಿಕೆ 2415-80-004-2-01-101 (ಯೋಜನೆ)ಗೆ ಮರುಹೊಂದಾಣಿಕೆ ಮಾಡಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಪಿಂಚಣಿಯನ್ನು ಪಾವತಿಸಲು ಆಗಿರುವ ಅನುದಾನದ ಕೊರತೆಯನ್ನು ಸರಿದೂಗಿಸಿಕೊಳ್ಳಲು ಹೆಚ್ಚುವರಿ ಅನುದಾನವಾಗಿ ಹಂಚಿಕೆ ಮಾಡಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಕೃಇ 53 ಕೃವಿಧಾ 2012**

**ಬೆಂಗಳೂರು, ದಿನಾಂಕ : 26-03-2013**

ಪ್ರಸ್ತಾವನೆಗಳಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೇತನ ಹಾಗೂ ಪಿಂಚಣಿ ಪಾವತಿಸಲು ಕೊರತೆಯಾದ ಯೋಜನೇತರ ಅನುದಾನವನ್ನು ಲೆಕ್ಕಶೀರ್ಷಿಕೆ 2401-00-110-0-09-106 (ಯೋಜನೆ) ಅಡಿಯಲ್ಲಿ ಉಳಿತಾಯವಾದ

ಅನುದಾನ ರೂ. 1200.00 ಲಕ್ಷಗಳನ್ನು (ರೂಪಾಯಿ ಒಂದು ಸಾವಿರದ ಎರಡು ನೂರು ಲಕ್ಷಗಳು ಮಾತ್ರ) ಲೆಕ್ಕಶೀರ್ಷಿಕೆ 2415-80-004-2-01-101 (ಯೋಜನೆ)ಗೆ ಮರುಹೊಂದಾಣಿಕೆಗೊಳಿಸಿ ಹಂಚಿಕೆ ಮಾಡಿರುವ ಹೆಚ್ಚುವರಿ ಅನುದಾನದಿಂದ ಸರಿದೂಗಿಸಿಕೊಳ್ಳಲು ಈ ಕೆಳಕಂಡ ಷರತ್ತಿಗೊಳಪಡಿಸಿ ಬಿಡುಗಡೆಗೊಳಿಸಿ ಆದೇಶಿಸಿದೆ :-

1. ಪ್ರತಿ ತಿಂಗಳ ಅನುದಾನವನ್ನು ಆಯಾ ತಿಂಗಳ 20ನೇ ತಾರೀಖಿನಂದು ಅಥವಾ 20ನೇ ತಾರೀಖಿನ ನಂತರ ಹಿಂದಿನ ತಿಂಗಳ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು;
2. ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು;
3. ಸರ್ಕಾರವು ನೀಡಿದ ಸೂಚನೆ, ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ಯೋಜನೆಯ ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು;
4. ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು;
5. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ;
6. ಆಯಾ ತಿಂಗಳಿಗೆ ಪ್ರತ್ಯೇಕ ಬಿಲ್ಲನ್ನು ಒದಗಿಸುವುದು.

2. ಬಿಡುಗಡೆಯಾಗಿರುವ ಅನುದಾನಕ್ಕೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ, ಇವರು ಸಲ್ಲಿಸುವ ಬಿಲ್ಲಿಗೆ ಮೇಲು ರುಜು ಮಾಡುವ ಅಧಿಕಾರವನ್ನು Regional Joint Director of Collegiate Education, Dharwad, ಇವರಿಗೆ ನೀಡಲಾಗಿದೆ.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ : 20-03-2013ರ ಆದೇಶ ಸಂಖ್ಯೆ : ಎಫ್‌ಡಿ 327 ಬಿಆರ್‌ಎಸ್ 2012ರಲ್ಲಿ ನೀಡಿರುವ ಮಂಜೂರಾತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜೆ. ಆರ್. ವಿಶ್ವನಾಥಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಕೃಷಿ ಯೋಜನೆ)

ಇವರಿಗೆ :-

1. ಮಹಾಲೇಖಪಾಲರು, ಕರ್ನಾಟಕ (ಲೆಕ್ಕಪತ್ರ/ತನಿಖೆ), ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ.
3. ಜಿಲ್ಲಾ ಖಜಾನಾಧಿಕಾರಿಗಳು, ಧಾರವಾಡ.
4. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ
5. ಕ್ಷೇತ್ರೀಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ.
6. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
7. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸರ್ವೀಸಸ್, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.